## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2026-27ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನಲ್ಲಿ ಎಫ್.ಎ.ಕ್ಯೂ. ಗುಣಮಟ್ಟದ **ಸೋಯಾಬೀನ್** ಖರೀದಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರ ಪತ್ರ ಕೃಮಾಮಂ/ಪ್ರೊ/ 21/1313/2026-27, ದಿನಾಂಕ: 04.08.2026.
2. ಸರ್ಕಾರದ ಪತ್ರ ಸಂ. ಸಿಐ 260 ಎಂಆರ್‌ಇ 2026, ದಿನಾಂಕ:17.08.2026 & 02.09.2026
3. ಕೇಂದ್ರ ಸರ್ಕಾರದ ಪತ್ರ L-15016/76/2026-MPS (197208), ದಿನಾಂಕ:29.09.2026.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರ ಸಂಖ್ಯೆ: ಕೃಮಾಮಂ/ಪ್ರೊ/1594/ 2026-27, ದಿನಾಂಕ: 01.10.2026

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ (01)ರಲ್ಲಿನ ಪ್ರಸ್ತಾವನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಇವರು ಸೋಯಾಬೀನ್ ಉತ್ಪನ್ನವು ರಾಜ್ಯದ ಪ್ರಮುಖ ಬೆಳೆಯಾಗಿದ್ದು, 2026-27ನೇ ಸಾಲಿಗೆ ರಾಜ್ಯದ ಪ್ರಮುಖ ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬೀದರ್, ಧಾರವಾಡ, ಬೆಳಗಾವಿ, ಹಾವೇರಿ ಮತ್ತು ಗದಗ ಹಾಗೂ ಇತರೆ ಜಿಲ್ಲೆಗಳು ಸೇರಿ ಕೃಷಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ ಅಂದಾಜು 4.00 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಅಂದಾಜು 4.62 ಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಸೋಯಾಬೀನ್ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬೀನ್ ಉತ್ಪನ್ನಕ್ಕೆ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.5,708/- ರಂತೆ ಘೋಷಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಹಾಗೂ ಅಧ್ಯಕ್ಷರು, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಇವರು ಪ್ರಸ್ತುತ ಮಾರುಕಟ್ಟೆಗಳಲ್ಲಿ ಆವಕವಾಗುತ್ತಿರುವ ಸೋಯಾಬೀನ್ ಉತ್ಪನ್ನವು ಕಟಾವು ನಂತರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಆವಕವಾಗಿ, ಮಾರುಕಟ್ಟೆ ಧಾರಣೆ ಕುಸಿಯುವ ಸಾಧ್ಯತೆಯಿರುವುದರಿಂದ, ಪ್ರಸ್ತುತ ಸಾಲಿಗೆ ಕೇಂದ್ರ ಸರ್ಕಾರವು ಸೋಯಾಬೀನ್ ಉತ್ಪನ್ನಕ್ಕೆ ಪ್ರತಿ ಕ್ವಿಂಟಾಲ್ ಗೆ ರೂ.5,708/-ರ ಬೆಂಬಲ ಬೆಲೆ ಘೋಷಿಸಿರುವಂತೆ, ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಖರೀದಿ ಕೇಂದ್ರಗಳನ್ನು ತೆರೆದು, ರೈತರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಪ್ರಸ್ತಾವನೆ ಸಲ್ಲಿಸಿರುವ ಹಿನ್ನೆಲೆಯಲ್ಲಿ, 2026-27ನೇ ಸಾಲಿಗೆ ಬೆಂಬಲ ಬೆಲ ಯೋಜನೆಯಡಿ ಮುಂಗಾರು ಹಂಗಾಮಿನ ಸೋಯಾಬೀನ್ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(02)ರ ಸರ್ಕಾರದ ಪತ್ರದಲ್ಲಿ, 2026-27ನೇ ಸಾಲಿನ ಮುಂಗಾರು ಹಂಗಾಮಿನ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದಲ್ಲಿ ಸೋಯಾಬೀನ್ ಖರೀದಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(03)ರ ಪತ್ರದಲ್ಲಿ, ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿಯಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಗರಿಷ್ಠ 1,15,500 ಮೆಟ್ರಿಕ್ ಟನ್ ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬೀನ್ ಅನ್ನು ರಾಜ್ಯ ಸರ್ಕಾರವು ನಿರ್ಧರಿಸಿದ ದಿನದಿಂದ 90 ದಿನಗಳ ಅವಧಿಯಲ್ಲಿ ಖರೀದಿಸಲು ಅನುಮತಿ ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(04)ರ ಪತ್ರದಲ್ಲಿ, ಕೇಂದ್ರ ಸರ್ಕಾರವು ಅನುಮೋದಿಸಿರುವಂತೆ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದಲ್ಲಿ ಸೋಯಾಬೀನ್ ಅನ್ನು ಖರೀದಿಸಲು, ರಾಜ್ಯದಲ್ಲಿ ಸೋಯಾಬೀನ್ ಬೆಳೆಯುವ ಪ್ರಮುಖ ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬೀದರ್, ಧಾರವಾಡ, ಬೆಳಗಾವಿ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಖರೀದಿ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ವಿವರವನ್ನು ಸಲ್ಲಿಸಿ, ಆದೇಶ ಹೊರಡಿಸುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದಲ್ಲಿ ಸೋಯಾಬೀನ್ ಅನ್ನು

...2

ಖರೀದಿಸಲು ನಿರ್ಧರಿಸಿದ್ದು, ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಚಿವ ಸಂಪುಟ ಉಪ ಸಮಿತಿ ಸಭೆಯ ಘಟನೋತ್ತರ ಮಂಜೂರಾತಿ ಪಡೆಯುವ ಷರತ್ತಿಗೊಳಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 260 ಎಂಆರ್ಇ 2026,ಬೆಂಗಳೂರು, ದಿನಾಂಕ:01.10.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸೋಯಾಬೀನ್ ಉತ್ಪನ್ನಕ್ಕೆ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ದರ **ಪ್ರತಿ ಕ್ವಿಂಟಾಲ್‌ಗೆ ರೂ.5,708/- ರಂತೆ ಗರಿಷ್ಠ 1,15,500 ಮೆಟ್ರಿಕ್ ಟನ್** ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬೀನ್ ಉತ್ಪನ್ನವನ್ನು ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ, ರಾಜ್ಯದ ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬೀದರ್, ಧಾರವಾಡ, ಬೆಳಗಾವಿ, ಹಾವೇರಿ ಮತ್ತು ಗದಗ ಜಿಲ್ಲೆಗಳ ರೈತರಿಂದ ಖರೀದಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

ಸೋಯಾಬೀನ್ ಅನ್ನು ಖರೀದಿಸಲು ನಾಫೆಡ್ (NAFED) ಹಾಗೂ ಎನ್.ಸಿ.ಸಿ.ಎಫ್. (NCCF) ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಯನ್ನಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ, ಬೆಂಗಳೂರು ಹಾಗೂ ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ (KOF), ಬೆಂಗಳೂರು ಸಂಸ್ಥೆಗಳನ್ನು ರಾಜ್ಯದ ವತಿಯಿಂದ ಖರೀದಿ ಸಂಸ್ಥೆಯನ್ನಾಗಿ ನೇಮಿಸಿದೆ.

**ಕೇಂದ್ರ ಹಾಗೂ ರಾಜ್ಯ ಖರೀದಿ ಸಂಸ್ಥೆಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಿರುವ ವಿವರಗಳು :-**

| **ನಾಫೆಡ್ ಸಂಸ್ಥೆ (NAFED)** | **ಎನ್.ಸಿ.ಸಿ.ಎಫ್. (NCCF)** |
|---|---|
| **ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ.** | **ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ (KOF)** |
| 01. ಬೀದರ್ | 01. ಬೆಳಗಾವಿ |
| 02. ಯಾದಗಿರಿ | 02. ಹಾವೇರಿ |
| 03. ಕಲಬುರಗಿ | 03. ಧಾರವಾಡ - ಹುಬ್ಬಳ್ಳಿ |
| 04. ಬಾಗಲಕೋಟೆ | 04. ಗದಗ |

**ಷರತ್ತುಗಳು**

1. ಈ ಆದೇಶ ಹೊರಡಿಸಿದ ದಿನದಿಂದ **ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ** ನಿಗದಿಪಡಿಸಿದ್ದು, ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನೂ ಸಹ ಪ್ರಾರಂಭಿಸತಕ್ಕದ್ದು.
2. ಪ್ರತಿ ಎಕರೆಗೆ **05 (ಐದು) ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಠ 25 (ಇಪ್ಪತ್ತೈದು) ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬೀನ್** ಖರೀದಿ ಪ್ರಮಾಣ ನಿಗದಿಪಡಿಸಿ ಖರೀದಿಸತಕ್ಕದ್ದು.
3. ರೈತರ ನೋಂದಣಿಯ ಆದ್ಯತೆಯ ಆಧಾರದ ಮೇಲೆ, ಮೊದಲು ನೋಂದಣಿ ಮಾಡಿಕೊಂಡ ರೈತರಿಗೆ ಖರೀದಿಯಲ್ಲಿ ಮೊದಲ ಆದ್ಯತೆ (First Come, First Served) ನೀಡತಕ್ಕದ್ದು.
4. ಸೋಯಾಬೀನ್ ಖರೀದಿಸುವ ಪೂರ್ವದಲ್ಲಿ ನಾಫೆಡ್ (NAFED) ಮತ್ತು ಎನ್.ಸಿ.ಸಿ.ಎಫ್ (NCCF) ಸಂಸ್ಥೆರವರು ಕ್ರಮವಾಗಿ ಅಭಿವೃದ್ಧಿಪಡಿಸಿರುವ ಇ-ಸಮೃದ್ಧಿ ಹಾಗೂ ಇ-ಸಂಯುಕ್ತಿ ದತ್ತಾಂಶದಲ್ಲಿ ರಾಜ್ಯದ ರೈತರ ಮಾಹಿತಿಯನ್ನು FRUITS ತಂತ್ರಾಂಶದೊಂದಿಗೆ ಸಂಯೋಜಿಸಿಕೊಂಡು, ಭೂಮಿ, ಬೆಳೆ ಸಮೀಕ್ಷೆ ದತ್ತಾಂಶ ಮತ್ತು UIDAIದೊಂದಿಗೆ ತಾಳೆ ಮಾಡಿ ವಿವರಗಳನ್ನು ಇಂದೀಕರಿಸಿಕೊಂಡು ರೈತರ ನೋಂದಣಿ ಮತ್ತು ಖರೀದಿ ಕೈಗೊಳ್ಳತಕ್ಕದ್ದು.
5. ಕೇಂದ್ರ ಖರೀದಿ ಏಜೆನ್ಸಿಗಳ ಪೋರ್ಟಲ್‌ನಲ್ಲಿ ಪ್ರತಿಯೊಂದು ಖರೀದಿ ಕೇಂದ್ರಗಳಲ್ಲಿಯೂ POS ಯಂತ್ರಗಳ ಮೂಲಕ UIDAI ಆಧಾರಿತ Biometric/face authentication ಮೂಲಕ ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
6. ಖರೀದಿ ಸಂಸ್ಥೆಗಳು ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ ನಾಫೆಡ್ ಹಾಗೂ ಎನ್.ಸಿ.ಸಿ.ಎಫ್. ಮಾರ್ಗಸೂಚಿಯನ್ವಯ ಹಾಗೂ ತಾಂತ್ರಿಕ ಮತ್ತು ವೈಜ್ಞಾನಿಕ ಸೌಲಭ್ಯದಿಂದ ಕೂಡಿರುವ ಗೋದಾಮುಗಳನ್ನು ಹೊಂದಿರುವ ಸದೃಢ **PACS/ OGCS/ TAPCMS/ FPO/ Agricultural**

...3

**Produce Co-operative Marketing & Processing Societies** ಸಂಸ್ಥೆಗಳ ಮುಖಾಂತರ ಒಡಂಬಡಿಕೆ ಮಾಡಿಕೊಂಡು ಖರೀದಿ ಕೇಂದ್ರಗಳನ್ನು ತೆರೆಯಲು ಕ್ರಮವಹಿಸತಕ್ಕದ್ದು.

7. ಸೋಯಾಬೀನ್ ಖರೀದಿ ಪ್ರಕ್ರಿಯೆಯಲ್ಲಿ ಎಫ್‌ಎಕ್ಯೂ ಗುಣಮಟ್ಟದ ಪರಿಶೀಲನೆಗಾಗಿ ಜಿಲ್ಲಾಡಳಿತ ಮಟ್ಟದಲ್ಲಿ ಕೃಷಿ / ತೋಟಗಾರಿಕೆ ಇಲಾಖೆಗಳಲ್ಲಿ ಲಭ್ಯವಿರುವ ಅಧಿಕಾರಿ/ಸಿಬ್ಬಂದಿಗಳನ್ನು ಬಳಸಿಕೊಳ್ಳುವುದು. ತರಬೇತಿ ಅವಶ್ಯವಿದ್ದಲ್ಲಿ ಅಂತಹ ಸಿಬ್ಬಂದಿಗಳಿಗೆ ಸೂಕ್ತ ಎಫ್.ಎ.ಕ್ಯೂ ಗ್ರೇಡಿಂಗ್ ತರಬೇತಿ ನೀಡಲು ಸಂಬಂಧಪಟ್ಟ ಖರೀದಿ ಸಂಸ್ಥೆಗಳು ಕ್ರಮವಹಿಸತಕ್ಕದ್ದು.
8. ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯು ಸಂಬಂಧಪಟ್ಟ ಜಿಲ್ಲೆಗಳಲ್ಲಿ ಅವಶ್ಯಕತೆಗನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಾಫೆಡ್ ಸಂಸ್ಥೆ, ಎನ್.ಸಿ.ಸಿ.ಎಫ್. ಸಂಸ್ಥೆ ಹಾಗೂ ರಾಜ್ಯ ಖರೀದಿ ಏಜೆನ್ಸಿಯೊಂದಿಗೆ ಸಮಾಲೋಚಿಸಿ ನಿರ್ಧರಿಸಿಕೊಂಡು, **ಈ ಆದೇಶ ಹೊರಡಿಸಿದ ದಿನಾಂಕದಿಂದ 03 ದಿನಗಳೊಳಗಾಗಿ** ಖರೀದಿ ಕೇಂದ್ರಗಳನ್ನು ತೆರೆದು ನೋಂದಣಿ ಕಾರ್ಯ ಪ್ರಾರಂಭಿಸತಕ್ಕದ್ದು.
9. ಬೆಂಬಲ ಬೆಲೆ ಯೋಜನೆಯ ಮಾರ್ಗಸೂಚಿಗಳಂತೆ, ಖರೀದಿಸಿದ ಉತ್ಪನ್ನದ ಮೌಲ್ಯವನ್ನು ರೈತರಿಗೆ 03 ದಿನದ ಒಳಗಾಗಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಗೆ ಕೇಂದ್ರ ಖರೀದಿ ಏಜೆನ್ಸಿಗಳಾದ NAFED ಹಾಗೂ NCCF ಸಂಸ್ಥೆಗಳು ರಾಜ್ಯದ ಇ-ಆಡಳಿತ ಇಲಾಖೆ ಮೂಲಕ ಸಿದ್ಧಪಡಿಸಿರುವ **DBT ಪೋರ್ಟಲ್ ಬಳಸಿಕೊಂಡು** ರೈತರಿಗೆ ಖರೀದಿಸಲಾದ ಉತ್ಪನ್ನದ ಮೊತ್ತವನ್ನು ಪಾವತಿ ಮಾಡತಕ್ಕದ್ದು ಹಾಗೂ **ಬೆಂಬಲ ಬೆಲೆ ಯೋಜನೆಯ ಹಾಗೂ ಆವರ್ತನಿಧಿ ಮಾರ್ಗಸೂಚಿಗಳನ್ನು** ಕಡ್ಡಾಯವಾಗಿ ಪಾಲಿಸತಕ್ಕದ್ದು.
10. ಕೇಂದ್ರ ಸರ್ಕಾರದ PSS ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (SC/ST) ಫಲಾನುಭವಿಗಳ ಮಾಹಿತಿಯನ್ನು ಕೇಂದ್ರ ನೋಡಲ್ ಏಜೆನ್ಸಿಗಳು ಹಾಗೂ ರಾಜ್ಯ ಖರೀದಿ ಏಜೆನ್ಸಿ ಕಡ್ಡಾಯವಾಗಿ ದಾಖಲಿಸಿಕೊಳ್ಳತಕ್ಕದ್ದು.
11. ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸುವ ಉತ್ಪನ್ನಗಳನ್ನು ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ, ಕೇಂದ್ರ / ರಾಜ್ಯ ಉಗ್ರಾಣಗಳ ಸಮೀಪ ಅಂದರೆ, 50 ಕಿ.ಮೀ. ವ್ಯಾಪ್ತಿಯೊಳಗೆ ವೈಜ್ಞಾನಿಕವಾಗಿ ಶೇಖರಿಸಲು ಕ್ರಮವಹಿಸತಕ್ಕದ್ದು. ಒಂದು ವೇಳೆ 50 ಕಿ.ಮೀ. ಗಿಂತ ಹೆಚ್ಚಿನ ದೂರದಲ್ಲಿ ದಾಸ್ತಾನು ಮಾಡುವ ಉತ್ಪನ್ನಗಳ ಸಾಗಾಣಿಕಾ ವೆಚ್ಚವನ್ನು ಪ್ರಕರಣವಾರು ಪರಿಶೀಲಿಸಿ, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
12. ಸೋಯಾಬೀನ್ ಖರೀದಿ ಕೇಂದ್ರಗಳಲ್ಲಿ ರೈತರ ಹೆಸರಿನಲ್ಲಿ ವರ್ತಕರು ತರುವ ಸೋಯಾಬೀನ್ ಉತ್ಪನ್ನವನ್ನು ಖರೀದಿಸದಂತೆ ಹಾಗೂ ಖರೀದಿ ಸಂಸ್ಥೆಗಳು ಯಾವುದೇ ರೀತಿಯ ದುರುಪಯೋಗ ಆಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸತಕ್ಕದ್ದು.
13. ಸೋಯಾಬೀನ್ ಉತ್ಪನ್ನವನ್ನು ಬೆಂಬಲ ಬೆಲೆ ಯೋಜನೆಯಡಿ ಸರ್ಕಾರದ ಆದೇಶ ಹಾಗೂ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಖರೀದಿಸಲಾಗಿದೆಯೇ ? ಎಂಬ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನಿರಂತರವಾಗಿ ನಿಗಾವಹಿಸುವುದು ಮತ್ತು ಖರೀದಿ ಪ್ರಕ್ರಿಯೆ ಮುಕ್ತಾಯವಾದ ನಂತರ ಖರೀದಿಸಿದ ಪ್ರಮಾಣ ಮತ್ತು ಗುಣಮಟ್ಟದ ಬಗ್ಗೆ ಖಾತರಿಪಡಿಸಿಕೊಂಡು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.
14. ಈ ಯೋಜನೆಯಡಿಯಲ್ಲಿ ಸೋಯಾಬೀನ್ ಖರೀದಿಸುವ ಪ್ರಗತಿಯ ವಿವರವನ್ನು ಸಂಬಂಧಿಸಿದ ರಾಜ್ಯ ಖರೀದಿ ಏಜೆನ್ಸಿಗಳು ಪ್ರತಿದಿನ ಸರ್ಕಾರಕ್ಕೆ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ e-Mail ಮೂಲಕ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

G.N. Dhanalakshmi
(ಜಿ.ಎನ್.ಧನಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಹಕಾರ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

operative Marketing & Processing Societies ಸಂಸ್ಥೆಗಳಲ್ಲಿ ಸರ್ಕಾರದ ವತಿಯಿಂದ ಸೋಯಾಬಿನ್ ಖರೀದಿಸುತ್ತಿದ್ದು, ಇವುಗಳ ಮೇಲ್ವಿಚಾರಣೆಯನ್ನು ಕೈಗೊಳ್ಳಲು ನೋಡಲ್ ಅಧಿಕಾರಿಯಾಗಿ ನೇಮಿಸಲು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ 75 ಖರೀದಿ ಕೇಂದ್ರಗಳ ಮೂಲಕ ಸೋಯಾಬಿನ್ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಖರೀದಿ ಕೇಂದ್ರಗಳನ್ನು ಆಯ್ಕೆ ಮಾಡುವುದು ರೈತರ ಹಿತ ದೃಷ್ಟಿಯಿಂದ ಸಮಂಜಸವೆಂದು ಸಭೆಯು ಅಭಿಪ್ರಾಯಪಡುತ್ತಾ, ಈ ಕೆಳಕಾಣಿಸಿದ ಖರೀದಿ ಕೇಂದ್ರಗಳನ್ನು ಆಯ್ಕೆ ಮಾಡಿ, ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

| ಕ್ರ.ಸಂ | ತಾಲ್ಲೂಕು | ಖರೀದಿ ಕೇಂದ್ರಗಳ ಹೆಸರು | ಉಗ್ರಾಣದ ಹೆಸರು | ಕೀ.ಮೀ |
|---|---|---|---|---|
| 01 | ಬೀದರ | ಪಿ.ಕೆ.ಪಿ.ಎಸ್ ಬಗದಲ್ | ರಾಜ್ಯ ಉಗ್ರಾಣ ನಿಗಮ,ಬೀದರ | 25.00 |
| 02 | “ ” | ಪಿ.ಕೆ.ಪಿ.ಎಸ್ ಜನವಾಡ | “ ” | 12.00 |
| 03 | “ ” | ಪಿ.ಕೆ.ಪಿ.ಎಸ್ ಮಾಳೆಗಾಂವ್ | “ ” | 15.00 |
| 04 | “ ” | ಪಿ.ಕೆ.ಪಿ.ಎಸ್ ಮನ್ನಳ್ಳಿ | “ ” | 25.00 |
| 05 | “ ” | ಪಿ.ಕೆ.ಪಿ.ಎಸ್ ಅಣದೂರ | “ ” | 16.00 |
| 06 | “ ” | ಪಿ.ಕೆ.ಪಿ.ಎಸ್ ಸಂಗೋಳಗಿ | “ ” | 26.00 |
| 07 | “ ” | ಪಿ.ಕೆ.ಪಿ.ಎಸ್ ಅಲಿಯಂಬರ್ | “ ” | 17.00 |
| 08 | “ ” | ಪಿ.ಕೆ.ಪಿ.ಎಸ್ ಚಾಂಬೋಳ್ | “ ” | 15.00 |
| 09 | “ ” | ಪಿ.ಕೆ.ಪಿ.ಎಸ್ ಯರನಳ್ಳಿ | “ ” | 25.00 |
| 10 | “ ” | ಪಿ.ಕೆ.ಪಿ.ಎಸ್ ಕಮಠಾಣ | “ ” | 12.00 |
| 11 | ಭಾಲ್ಕಿ | ಪಿ.ಕೆ.ಪಿ.ಎಸ್ ಲಖನಗಾಂವ್ | ರಾಜ್ಯ ಉಗ್ರಾಣ ನಿಗಮ,ಭಾಲ್ಕಿ | 22.00 |
| 12 | “ ” | ಪಿ.ಕೆ.ಪಿ.ಎಸ್ ಖಟಕ ಚಿಂಚೋಳಿ | “ ” | 21.00 |
| 13 | “ ” | ಪಿ.ಕೆ.ಪಿ.ಎಸ್ ಕುರುಬಖೇಳಗಿ | “ ” | 13.00 |
| 14 | “ ” | ಪಿ.ಕೆ.ಪಿ.ಎಸ್ ಸಾಯಿಗಾಂವ್ | “ ” | 25.00 |
| 15 | “ ” | ಪಿ.ಕೆ.ಪಿ.ಎಸ್ ಭಾತಂಬ್ರಾ | “ ” | 08.00 |
| 16 | “ ” | ಪಿ.ಕೆ.ಪಿ.ಎಸ್ ನಿಟ್ಟೂರ್ | “ ” | 20.00 |
| 17 | “ ” | ಪಿ.ಕೆ.ಪಿ.ಎಸ್ ವಳಸಂಗ | “ ” | 11.00 |
| 18 | “ ” | ಪಿ.ಕೆ.ಪಿ.ಎಸ್ ತಳವಾಡ.ಎಂ | “ ” | 07.00 |
| 19 | “ ” | ಪಿ.ಕೆ.ಪಿ.ಎಸ್ ದೋಣಗಾಪೂರ | “ ” | 10.00 |
| 20 | “ ” | ಸಹಯೋಗ ಸುವಿಧಾ ರೈತ ಉತ್ಪಾದಕರ ಕಂಪನಿ ಲಿ.ಹಲಬರ್ಗಾ | “ ” | 20.00 |
| 21 | “ ” | ಪಿ.ಕೆ.ಪಿ.ಎಸ್ ಚಳಕಾಪೂರ | “ ” | 28.00 |
| 22 | “ ” | ಪಿ.ಕೆ.ಪಿ.ಎಸ್ ಬ್ಯಾಲಹಳ್ಳಿ | “ ” | 26.00 |
| 23 | “ ” | ಪಿ.ಕೆ.ಪಿ.ಎಸ್ ಧನ್ನೂರ.ಎಚ್ | “ ” | 18.00 |
| 24 | “ ” | ಪಿ.ಕೆ.ಪಿ.ಎಸ್ ಮೆಹಕರ | “ ” | 32.00 |
| 25 | “ ” | ಪಿ.ಕೆ.ಪಿ.ಎಸ್ ಕಳಸದಾಳ | “ ” | 11.00 |
| 26 | ಹುಮನಾಬಾದ | ಪಿ.ಕೆ.ಪಿ.ಎಸ್ ನೀರ್ಣಾ | ರಾಜ್ಯ ಉಗ್ರಾಣ ನಿಗಮ,ಬೀದರ | 40.00 |
| 27 | “ ” | ಪಿ.ಕೆ.ಪಿ.ಎಸ್ ಹಳ್ಳಿಖೇಡ್.ಬಿ | “ ” | 35.00 |
| 28 | “ ” | ಪಿ.ಕೆ.ಪಿ.ಎಸ್ ಉಡಮನಳ್ಳಿ | “ ” | 45.00 |
| 29 | “ ” | ಪಿ.ಕೆ.ಪಿ.ಎಸ್ ಮನ್ನಾಏಖೇಳ್ಳಿ | “ ” | 30.00 |

| | | | | |
|---|---|---|---|---|
| 30 | “ ” | ಪಿ.ಕೆ.ಪಿ.ಎಸ್ ಬೇಮಳಖೇಡಾ | “ ” | 40.00 |
| 31 | “ ” | ಪಿ.ಕೆ.ಪಿ.ಎಸ್ ಚಿಟ್ಟಗುಪ್ಪ | “ ” | 50.00 |
| 32 | “ ” | ಪಿ.ಕೆ.ಪಿ.ಎಸ್ ಘಾಟಬೋರಾಳ | “ ” | 55.00 |
| 33 | “ ” | ಪಿ.ಕೆ.ಪಿ.ಎಸ್ ದುಬಲಗುಂಡಿ | “ ” | 48.00 |
| 34 | “ ” | ಪಿ.ಕೆ.ಪಿ.ಎಸ್ ಮದರಗಾಂವ್ | “ ” | 50.00 |
| 35 | “ ” | ಮಹಾಗಾಯಿ ರೈತ ಉತ್ಪಾದಕರ ಕಂಪನಿ ಲಿ. ಚಾಂಗಲೇರಾ | “ ” | 50.00 |
| 36 | “ ” | ಪಿ.ಕೆ.ಪಿ.ಎಸ್ ತಾಳಮಡಗಿ | “ ” | 45.00 |
| 37 | “ ” | ವನಶ್ರೀ ರೈತ ಉತ್ಪಾದಕರ ಕಂಪನಿ ಲಿ.ಶಮತಾಬಾದ | “ ” | 50.00 |
| 38 | “ ” | ಪಿ.ಕೆ.ಪಿ.ಎಸ್ ಅಲ್ಲೂರ | “ ” | 40.00 |
| 39 | ,, ,, | ಪಿ.ಕೆ.ಪಿ.ಎಸ್ ಚಾಂಗಲೇರಾ | ,, ,, | 50.00 |
| 40 | ಬಸವಕಲ್ಯಾಣ | ಪಿ.ಕೆ.ಪಿ.ಎಸ್ ಮುಡಬಿ | ರಾಜ್ಯ ಉಗ್ರಾಣ ನಿಗಮ,ಬಸವಕಲ್ಯಾಣ | 20.00 |
| 41 | “ ” | ಪಿ.ಕೆ.ಪಿ.ಎಸ್ ಕೋಹಿನೂರ್ | “ ” | 32.00 |
| 42 | “ ” | ಪಿ.ಕೆ.ಪಿ.ಎಸ್ ಮೈಸಲಗಾ | “ ” | 30.00 |
| 43 | “ ” | ಪಿ.ಕೆ.ಪಿ.ಎಸ್ ರಾಜೇಶ್ವರ್ | “ ” | 20.00 |
| 44 | “ ” | ಪಿ.ಕೆ.ಪಿ.ಎಸ್ ಹುಲಸೂರ | “ ” | 20.00 |
| 45 | “ ” | ಪಿ.ಕೆ.ಪಿ.ಎಸ್ ಗಡಿಗೌಡಗಾಂವ್ | “ ” | 15.00 |
| 46 | “ ” | ಪಿ.ಕೆ.ಪಿ.ಎಸ್ ಮುಚಳಂಬ | “ ” | 14.00 |
| 47 | “ ” | ಪಿ.ಕೆ.ಪಿ.ಎಸ್ ಲಾಡವಂತಿ | “ ” | 40.00 |
| 48 | “ ” | ಪಿ.ಕೆ.ಪಿ.ಎಸ್ ಹೀರಣಗಾಂವ್ | “ ” | 25.00 |
| 49 | “ ” | ಪಿ.ಕೆ.ಪಿ.ಎಸ್ ಬೆಟಗೇರಾ | “ ” | 25.00 |
| 50 | “ ” | ಪಿ.ಕೆ.ಪಿ.ಎಸ್ ಹಾರಕೂಡ | “ ” | 28.00 |
| 51 | “ ” | ಪಿ.ಕೆ.ಪಿ.ಎಸ್ ಮಂಠಾಳ | “ ” | 12.00 |
| 52 | “ ” | ಪಿ.ಕೆ.ಪಿ.ಎಸ್ ಭೋಸಗಾ | “ ” | 26.00 |
| 53 | “ ” | ಪಿ.ಕೆ.ಪಿ.ಎಸ್. ಮಿರಖಲ್ | “ ” | 14.00 |
| 54 | “ ” | ಪಿ.ಕೆ.ಪಿ.ಎಸ್ ಹೊನ್ನಳ್ಳಿ | “ ” | 23.00 |
| 55 | “ ” | ಪಿ.ಕೆ.ಪಿ.ಎಸ್ ಆಲಗೂಡ್ | “ ” | 22.00 |
| 56 | “ ” | ಪಿ.ಕೆ.ಪಿ.ಎಸ್ ಗುಂಡೂರ | “ ” | 12.00 |
| 57 | “ ” | ಶೇಟ್ಟಪ್ಪಾ ರೈತ ಉತ್ಪಾದಕರ ಕಂಪನಿ ಲಿ,ಗೌರ್ | “ ” | 14.00 |
| 58 | ಔರಾದ(ಬಾ) | ಪಿ.ಕೆ.ಪಿ.ಎಸ್ ಔರಾದ.ಬಿ | ರಾಜ್ಯ ಉಗ್ರಾಣ ನಿಗಮ,ಔರಾದ | 05.00 |
| 59 | “ ” | ಪಿ.ಕೆ.ಪಿ.ಎಸ್ ಜೋಜನಾ | “ ” | 15.00 |
| 60 | “ ” | ಪಿ.ಕೆ.ಪಿ.ಎಸ್ ಠಾಣಕೂಶನೂರ | “ ” | 18.00 |
| 61 | “ ” | ಪಿ.ಕೆ.ಪಿ.ಎಸ್ ಸಂಗಮ | “ ” | 27.00 |
| 62 | “ ” | ಪಿ.ಕೆ.ಪಿ.ಎಸ್ ನೀಡೊದ | “ ” | 21.00 |
| 63 | “ ” | ಪಿ.ಕೆ.ಪಿ.ಎಸ್ ವಡಗಾಂವ್ | “ ” | 22.00 |
| 64 | “ ” | ಪಿ.ಕೆ.ಪಿ.ಎಸ್ ಮುಧೋಳ.ಬಿ | “ ” | 18.00 |
| 65 | “ ” | ಪಿ.ಕೆ.ಪಿ.ಎಸ್ ಕೌಠಾ.ಬಿ | “ ” | 27.00 |

| | | | | |
|---|---|---|---|---|
| 66 | “ ” | ಪಿ.ಕೆ.ಪಿ.ಎಸ್ ಸಂತಪೂರ | “ ” | 12.00 |
| 67 | “ ” | ಪಿ.ಕೆ.ಪಿ.ಎಸ್ ದಾಬಕಾ.ಸಿ | “ ” | 25.00 |
| 68 | “ ” | ಪಿ.ಕೆ.ಪಿ.ಎಸ್ ಕಮಲನಗರ | “ ” | 30.00 |
| 69 | “ ” | ಚಿಂಚಸೂರ ರೈತ ಉತ್ಪಾದಕರ ಕಂಪನಿ ಲಿ. ಡೋಣಗಾಂವ್.ಎಂ | “ ” | 13.00 |
| 70 | “ ” | ಓನ್ರಾಯ್ ಆಗ್ರೋ ಉತ್ಪಾದಕರ ಕಂಪನಿ.ಲಿ ಹಂಗರಗಾ | “ ” | 24.00 |
| 71 | “ ” | ಪಿ.ಕೆ.ಪಿ.ಎಸ್ ಬೇಡಕುಂದಾ | “ ” | 20.00 |
| 72 | “ ” | ಪಿ.ಕೆ.ಪಿ.ಎಸ್ ಹೊಕ್ರಾಣ | “ ” | 21.00 |
| 73 | “ ” | ನಾಗೂರ ಭೂಮಿ ರೈತ ಉತ್ಪಾದಕರ ಕಂ. ಲಿ ನಂದಿ ನಾಗೂರ | “ ” | 25.00 |
| 74 | “ ” | ಪಿ.ಕೆ.ಪಿ.ಎಸ್ ನಾಗಮಾರಪಳ್ಳಿ | “ ” | 15.00 |
| 75 | ” | ಮಹದೇವ ಕ್ರಿಷಿ ವಿಕಾಸ ಉತ್ಪಾದಕರ ಕಂ.ಲಿ. ಕಂದಗೋಳ | ” ” | 25.00 |

**ಷರತ್ತು ಮತ್ತು ನಿಬಂಧನೆಗಳು ಕೆಳಗಿನಂತೆ ಇರುತ್ತವೆ.**

1) ಈ ಆದೇಶ ಹೊರಡಿಸಿದ ದಿನದಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಿದ್ದು, ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನೂ ಸಹ ಪ್ರಾರಂಭಿಸತಕ್ಕದ್ದು.
2) ಪ್ರತಿ ಎಕರೆಗೆ 05 (ಐದು) ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಟ 25 (ಇಪ್ಪತ್ತೈದು) ಕ್ವಿಂಟಾಲ್ ಖರೀದಿ ಪ್ರಮಾಣ ನಿಗದಿಪಡಿಸಿ ಖರೀದಿಸತಕ್ಕದ್ದು.
3) ರೈತರ ನೋಂದಣಿಯ ಆದ್ಯತೆಯ ಆಧಾರದ ಮೇಲೆ, ಮೊದಲು ನೋಂದಣಿ ಮಾಡಿಕೊಂಡ ರೈತರಿಗೆ ಖರೀದಿಯಲ್ಲಿ ಮೊದಲ ಆದ್ಯತೆ (First Come, First Served) ನೀಡತಕ್ಕದ್ದು.
4) ಸೋಯಾಬೀನ್ ಖರೀದಿಸುವ ಪೂರ್ವದಲ್ಲಿ ನಾಫೆಡ್ ಸಂಸ್ಥೆರವರು ಕ್ರಮವಾಗಿ ಅಭಿವೃದ್ಧಿಪಡಿಸಿರುವ ಇ-ಸಮೃದ್ಧಿ ಹಾಗೂ ಇ-ಸಂಯುಕ್ತಿ ದತ್ತಾಂಶದಲ್ಲಿ ರಾಜ್ಯದ ರೈತರ ಮಾಹಿತಿಯನ್ನು FRUITS ತಂತ್ರಾಂಶದೊಂದಿಗೆ ಸಂಯೋಜಿಸಿಕೊಂಡು, ಭೂಮಿ, ಬೆಳೆ ಸಮೀಕ್ಷೆ ದತ್ತಾಂಶ ಮತ್ತು UIDAI ದೊಂದಿಗೆತಾಳೆ ಮಾಡಿ ವಿವರಗಳನ್ನು ಇಂದೀಕರಿಸಿಕೊಂಡು ರೈತರ ನೋಂದಣಿ ಮತ್ತು ಖರೀದಿ ಕೈಗೊಳ್ಳತಕ್ಕದ್ದು.
5) ಕೇಂದ್ರ ಖರೀದಿ ಏಜೆನ್ಸಿಗಳ ಪೋರ್ಟಲ್‌ನಲ್ಲಿ ಪ್ರತಿಯೊಂದು ಖರೀದಿ ಕೇಂದ್ರಗಳಲ್ಲಿಯೂ POS ಯಂತ್ರಗಳ ಮೂಲಕ UIDAI ಆಧಾರಿತ Biometric/face authentication ಮೂಲಕ ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
6) ಖರೀದಿ ಸಂಸ್ಥೆಗಳು ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ ನಾಫೆಡ್ ಮಾರ್ಗಸೂಚಿಯನ್ವಯ ಹಾಗೂ ತಾಂತ್ರಿಕ ಮತ್ತು ವೈಜ್ಞಾನಿಕ ಸೌಲಭ್ಯದಿಂದ ಕೂಡಿರುವ ಗೋದಾಮುಗಳನ್ನು ಹೊಂದಿರುವ ಸಧೃಢ PACS/OGCS/TAPCMS/FPO/Agricultural produce Co-operative Marketing & Processing Societies ಸಂಸ್ಥೆಗಳ ಮುಖಾಂತರ ಒಡಂಬಡಿಕೆ ಮಾಡಿಕೊಂಡು ಖರೀದಿ ಕೇಂದ್ರಗಳನ್ನು ತೆರೆಯಲು ಕ್ರಮವಹಿಸತಕ್ಕದ್ದು.
7) ಸೋಯಾಬೀನ್ ಖರೀದಿ ಪ್ರಕ್ರಿಯೆಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಪರಿಶೀಲನೆಗಾಗಿ ಜಿಲ್ಲಾಡಳಿತ ಮಟ್ಟದಲ್ಲಿ ಕೃಷಿ/ತೋಟಗಾರಿಕೆ ಇಲಾಖೆಗಳಲ್ಲಿ ಲಭ್ಯವಿರುವ ಅಧಿಕಾರಿ/ಸಿಬ್ಬಂದಿಗಳನ್ನು ಬಳಸಿಕೊಳ್ಳುವುದು. ತರಬೇತಿ ಅವಶ್ಯವಿದ್ದಲ್ಲಿ ಅಂತಹ ಸಿಬ್ಬಂದಿಗಳಿಗೆ ಸೂಕ್ತ ಎಫ್.ಎ.ಕ್ಯೂ ಗ್ರೇಡಿಂಗ್ ತರಬೇತಿ ನೀಡಲು ಸಂಬಂಧಪಟ್ಟ ಖರೀದಿ ಸಂಸ್ಥೆಗಳು ಕ್ರಮವಹಿಸತಕ್ಕದ್ದು.

8) ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯು ಸಂಬಂಧಪಟ್ಟ ಜಿಲ್ಲೆಗಳಲ್ಲಿ ಅವಶ್ಯಕತೆಗನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಾಫೆಡ್ ಸಂಸ್ಥೆ ಹಾಗೂ ಖರೀದಿ ಏಜೆನ್ಸಿಯೊಂದಿಗೆ ಸಮಾಲೋಚಿಸಿ ನಿರ್ಧರಿಸಿಕೊಂಡು, ಈ ಆದೇಶ ಹೊರಡಿಸಿದ ದಿನಾಂಕದಿಂದ 03 ದಿನಗಳೊಳಗಾಗಿ ಖರೀದಿ ಕೇಂದ್ರಗಳನ್ನು ತೆರೆದು ನೋಂದಣಿ ಕಾರ್ಯ ಪ್ರಾರಂಭಿಸತಕ್ಕದ್ದು.

9) ಬೆಂಬಲ ಬೆಲೆ ಯೋಜನೆಯ ಮಾರ್ಗಸೂಚಿಗಳಂತೆ, ಖರೀದಿಸಿದ ಉತ್ಪನ್ನದ ಮೌಲ್ಯವನ್ನು ರೈತರಿಗೆ 03 ದಿನದ ಒಳಗಾಗಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಗೆ ಕೇಂದ್ರ ಖರೀದಿ ಏಜೆನ್ಸಿಗಳಾದ ನಾಫೆಡ್ ಸಂಸ್ಥೆಯು ರಾಜ್ಯದ ಇ-ಆಡಳಿತ ಇಲಾಖೆ ಮೂಲಕ ಸಿದ್ಧಪಡಿಸಿರುವ DBT ಪೋರ್ಟಲ್ ಬಳಸಿಕೊಂಡು ರೈತರಿಗೆ ಖರೀದಿಸಲಾದ ಉತ್ಪನ್ನದ ಮೊತ್ತವನ್ನು ಪಾವತಿ ಮಾಡತಕ್ಕದ್ದು. ಹಾಗೂ ಆವರ್ತನಿಧಿ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

10) ಕೇಂದ್ರ ಸರ್ಕಾರದ PSS ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (SC/ST) ಫಲಾನುಭವಿಗಳ ಮಾಹಿತಿಯನ್ನು ಕೇಂದ್ರ ನೋಡಲ್ ಏಜೆನ್ಸಿಗಳು ಹಾಗೂ ರಾಜ್ಯ ಖರೀದಿ ಏಜೆನ್ಸಿ ಕಡ್ಡಾಯವಾಗಿ ದಾಖಲಿಸಿಕೊಳ್ಳತಕ್ಕದ್ದು.

11) ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸುವ ಉತ್ಪನ್ನಗಳನ್ನು ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಕೇಂದ್ರ/ರಾಜ್ಯ ಉಗ್ರಾಣಗಳ ಸಮೀಪ ಅಂದರೆ, 50 ಕಿ.ಮೀ. ವ್ಯಾಪ್ತಿಯೊಳಗೆ ವೈಜ್ಞಾನಿಕವಾಗಿ ಶೇಖರಿಸಲು ಕ್ರಮವಹಿಸತಕ್ಕದ್ದು, ಒಂದು ವೇಲೆ 50 ಕಿ.ಮೀ. ಗಿಂತ ಹೆಚ್ಚಿನ ದೂರದಲ್ಲಿ ದಾಸ್ತಾನು ಮಾಡುವ ಉತ್ಪನ್ನಗಳ ಸಾಗಾಣಿಕಾ ವೆಚ್ಚವನ್ನು ಪ್ರಕರಣವಾರು ಪರಿಶೀಲಿಸಿ, ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

12) ಸೋಯಾಬಿನ್ ಖರೀದಿ ಕೇಂದ್ರಗಳಲ್ಲಿ ರೈತರ ಹೆಸರಿನಲ್ಲಿ ವರ್ತಕರು ತರುವ ಸೋಯಾಬೀನ್ ಉತ್ಪನ್ನವನ್ನು ಖರೀದಿಸದಂತೆ ಹಾಗೂ ಖರೀದಿ ಸಂಸ್ಥೆಗಳು ಯಾವುದೇ ರೀತಿಯ ದುರುಪಯೋಗ ಆಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸತಕ್ಕದ್ದು.

13) ಸೋಯಾಬೀನ್ ಉತ್ಪನ್ನವನ್ನು ಬೆಂಬಲ ಬೆಲೆ ಯೋಜನೆಯಡಿ ಸರ್ಕಾರದ ಆದೇಶ ಹಾಗೂ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಖರೀದಿಸಲಾಗಿದೆಯೇ ಎಂಬ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನಿರಂತರವಾಗಿ ನಿಗಾವಹಿಸುವುದು. ಮತ್ತು ಖರೀದಿ ಪ್ರಕ್ರಿಯೆ ಮುಕ್ತಾಯವಾದ ನಂತರ ಖರೀದಿಸಿದ ಪ್ರಮಾಣ ಮತ್ತು ಗುಣಮಟ್ಟದ ಬಗ್ಗೆ ಖಾತರಿಪಡಿಸಿಕೊಂಡು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸುವುದು.

14) ಈ ಯೋಜನೆಯಡಿಯಲ್ಲಿ ಸೋಯಾಬೀನ್ ಖರೀದಿಸುವ ಪ್ರಗತಿಯ ವಿವರವನ್ನು ಸಂಬಂಧಿಸಿದ ರಾಜ್ಯ ಖರೀದಿ ಏಜೆನ್ಸಿಗಳು ಪ್ರತಿದಿನ ಸರ್ಕಾರಕ್ಕೆ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ e-Mail ಮೂಲಕ ಸಲ್ಲಿಸತಕ್ಕದ್ದು.

15) ಜಿಲ್ಲೆಯಲ್ಲಿ ಖರೀದಿಗೆ ಅಗತ್ಯವಾದ ಉಗ್ರಾಣಗಳು ಖರೀದಿ ಕೇಂದ್ರದಿಂದ 50 ಕಿ.ಮೀ. ಒಳಗೆ ಲಭ್ಯವಿಲ್ಲದಿದ್ದಲ್ಲಿ ಅಥವಾ 50 ಕಿ.ಮೀ. ವ್ಯಾಪ್ತಿಯಲ್ಲಿರುವ ಉಗ್ರಾಣಗಳು ದಾಸ್ತಾನು ಭರ್ತಿಯಾದಲ್ಲಿ 50 ಕ.ಮೀ. ಗಿಂತ ಹೆಚ್ಚಿನ ದೂರದ ಉಗ್ರಾಣಗಳಲ್ಲಿ ಖರೀದಿಸಿದ ದಾಸ್ತಾನನ್ನು ಶೇಖರಿಸಲು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ನಿರ್ಣಯಿಸಲಾಯಿತು.

ಮೇಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸುತ್ತಾ, ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ,ಬೀದರ.

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರು
ಬೀದರ.

**ಪ್ರತಿಗಳನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1) ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಹಾಗೂ ಅಧ್ಯಕ್ಷರು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ, ಬೀದರ.
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ.
3) ಮಾನ್ಯ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೀದರ.